

ಕೆ.ಎಲ್. ಭಟ್ಟರ ಕುಂಚದಲ್ಲಿ ಮೂಡಿದ 'ಕೃಷ್ಣಾರ್ಜುನ' ಕಲಾಕೃತಿ

ಕಲಾಶಾಲೆಗಳಿಗೆ ಭೇಟಿ ನೀಡಿ ಕಲಿಕಾ ವಿಧಾನ ಮತ್ತು ಪರೀಕ್ಷೆಗಳ ಮೇಲ್ವಿಚಾರಣೆ ನಡೆಸುತ್ತಿದ್ದವರು ಭಟ್ಟರು.

ಚಿತ್ರಕಲಾ ಮಂದಿರದ ಅಧ್ಯಾಪನದ ಜೊತೆಗೆ ವಾರಾಂತ್ಯದ ತರಗತಿಗಳನ್ನೂ ಕೆ.ಎಲ್. ಭಟ್ಟರು ನಡೆಸುತ್ತಿದ್ದರು. ಮಣಿಪಾಲದ ಎಂ.ಐ.ಟಿ.ಯ ತಾಂತ್ರಿಕ ವಿದ್ಯಾರ್ಥಿಗಳಿಗೂ ಅತಿಥಿ ಉಪನ್ಯಾಸಕರಾಗಿ ಚಿತ್ರಕಲೆಯ ಮೂಲಭೂತ ಅಂಶಗಳನ್ನು ಬೋಧಿಸುತ್ತಿದ್ದರು. ಆ ಸಂದರ್ಭದಲ್ಲಿ ದೆಹಲಿಯಿಂದ ಬರುತ್ತಿದ್ದ ವಿಶ್ವವಿದ್ಯಾಲಯದ ಮೇಲಧಿಕಾರಿಗಳು ಅವರ ಅಧ್ಯಾಪನ ಕ್ರಮವನ್ನು ನೋಡಿ ಹೆಮ್ಮೆಪಡುತ್ತಿದ್ದರು.

ಕೆ.ಎಲ್. ಭಟ್ಟರು ಬದುಕಿದ ಬದುಕಿಗೆ ಒತ್ತಾಸೆಯಾಗಿ ನಿಂತವರು ಅವರ ಪತ್ನಿ ಶ್ರೀಮತಿ. ಬರುತ್ತಿದ್ದ ಅಲ್ಪ ಸಂಬಳದಲ್ಲಿಯೇ ಮೂವರು ಮಕ್ಕಳನ್ನು ಹೇಗೆ ಸಾಕಿ ಬೆಳೆಸಿದರೋ ಅವರಿಗೇ ಗೊತ್ತು. ವಿದ್ಯಾರ್ಥಿಗಳೊಂದಿಗೆ ಹಸನ್ಮುಖಿಯಾಗಿ ಪಾಠಹೇಳುತ್ತಿದ್ದ ಭಟ್ಟರ ಇನ್ನೊಂದು ಮುಖದಲ್ಲಿ ಏನಿತ್ತೆಂಬುದು ಅವರನ್ನು ಹತ್ತಿರದಿಂದ ಬಲ್ಲ ಕೆಲವರಿಗಷ್ಟೇ ಗೊತ್ತು.

ಸಾಮಾನ್ಯವಾಗಿ ಸೃಜನಶೀಲ ವ್ಯಕ್ತಿಗಳ ಯಾವತ್ತೂ ಸಮಸ್ಯೆಯೆಂದರೆ ತಮ್ಮ ನೆಚ್ಚಿನವರ ಪ್ರಭಾವಕ್ಕೆ ಒಳಗಾಗುವುದು. ಕೆ.ಎಲ್. ಭಟ್ಟರು ಅವರೇ ಹೇಳಿದಂತೆ, ಅವರು ಯಾವೊಬ್ಬ ಕಲಾವಿದನಿಂದಲೂ ಪ್ರಭಾವಿತರಾದವರಲ್ಲ. ಮುಂಬೈಯಲ್ಲಿ ಬಿಡುವಿದ್ದಾಗಲೆಲ್ಲ ಜಹಾಂಗೀರ್ ಆರ್ಟ ಗ್ಯಾಲರಿ, ಹೆಬ್ಬಾರರ ಗ್ಯಾಲರಿ, ಎಂ.ಎಫ್. ಹುಸೇನರ ಚಿತ್ರಗಳು, ಗೇಟ್‌ವೇ ಅಫ್ ಇಂಡಿಯಾದ ಬಳಿಯ ಮ್ಯೂಸಿಯಂಗಳಿಗೆ ಭೇಟಿ ನೀಡುತ್ತಿದ್ದರು. ಅಲ್ಲಿನ ಕಲಾಕೃತಿಗಳನ್ನು ನೋಡುತ್ತಲೇ ತಮ್ಮ ಭಾವನೆಗಳಿಗೆ ಹೊಸ ರೂಪ ನೀಡಿ ಚಿತ್ರಿಸುತ್ತಿದ್ದರು. ಹಾಗಾಗಿಯೇ ಇಂಗ್ಲಿಷ್ ಕಾಲದ ಅಕಡೆಮಿಕ್ ಶಿಕ್ಷಣ ಪಡೆದೂ ಅವರ ಚಿತ್ರಗಳಲ್ಲಿ ತಮ್ಮ ಪರಿಸರದ, ದಿನನಿತ್ಯದ ಬದುಕಿನ ಸೆಲೆಯ ಎಳೆ–ರೇಖೆಗಳನ್ನು ಕಾಣಬಹುದು. ಯಾವುದೇ ಶೈಲಿ ಸಿದ್ಧಾಂತದ ಹಂಗಿಲ್ಲದೇ ಸ್ವಚ್ಛಂದವಾಗಿ ಹರಿದಾಡುವ ರೇಖೆಗಳಂತೆಯೇ ಅವರ ಬದುಕೂ ಇತ್ತೆಂದು ಅವರ ಪತ್ನಿ ಶ್ರೀಮತಿಯವರು ನೆನಪಿಸಿಕೊಳ್ಳುತ್ತಾರೆ.

ಕೆ.ಎಲ್. ಭಟ್ಟರು ತಮ್ಮ ಕಲಾಕೃತಿಗಳನ್ನು ಮಾರಾಟದ ಸರಕಾಗಿ ಎಂದೂ ಭಾವಿಸಿರಲಿಲ್ಲ. ಪ್ರದರ್ಶನಗಳಿಗೆ, ಕಲಾಮೇಳಗಳಿಗೆ ತಮ್ಮ ಕಲಾಕೃತಿಯನ್ನು ಕಳುಹಿಸಿದರೆ ಎಷ್ಟೋ ಸಲ ಹಿಂದಕ್ಕೇ ಬರುತ್ತಿರಲಿಲ್ಲ. ಆಯೋಜಕರು ತಮ್ಮಲ್ಲಿಯೇ ಇರಲಿ ಎಂದು ಇಟ್ಟುಕೊಳ್ಳುತ್ತಿದ್ದರು. ಕೆಲವರು ಇವರ ಚಿತ್ರಗಳಿಗೆ ಅಷ್ಟೋ ಇಷ್ಟೋ ಕೊಟ್ಟರೆ ಅದರಲ್ಲೇ ತೃಪ್ತಿಪಡುತ್ತಿದ್ದರು. ಕಲೆಯನ್ನು 'ಅನಂತ' ಎಂದು ನಂಬಿದ್ದ ಭಟ್ಟರು ತಮ್ಮ ಕೊನೆಯ ದಿನಗಳವರೆಗೂ ಚಿತ್ರಿಸುವುದನ್ನು ಬಿಟ್ಟಿರಲಿಲ್ಲ.

ಇಂದು ಕೆ.ಎಲ್. ಭಟ್ಟರು ನಮ್ಮೊಂದಿಗಿಲ್ಲ. ಇದೇ ಏಪ್ರಿಲ್ 15ರಂದು 'ವಿಶ್ವ ಕಲಾದಿನ'ದಂದೇ ತಮ್ಮ ಕಲಾ ಬದುಕಿಗೆ ಹಸ್ತಾಕ್ಷರ ಬರೆದು ವಿರಮಿಸಿದರು. ಪ್ರಶಸ್ತಿ ಪುರಸ್ಕಾರಗಳಿಗಾಗಿ ನಡೆಸುವ ದೊಂಬರಾಟದ ಮಧ್ಯೆ ಆತ್ಮಸಾಕ್ಷಿಗೆ ಚ್ಯುತಿಯಾಗದಂತೆ ತನ್ನಿಷ್ಟದ ಕಂಬಳ, ಯಕ್ಷಗಾನ, ಕೋಳಿ ಅಂಕ, ನವಿಲು ಇತ್ಯಾದಿ ವಿಷಯದೊಳಗೆ ಮುಳುಗಿರುತ್ತಿದ್ದ ಭಟ್ಟರ ಕಲಾ ಸಾಧನೆಯನ್ನು 1999ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ಗುರುತಿಸಿ ಗೌರವಿಸಿತ್ತು. ಕಲಾಶಿಕ್ಷಕರೇ ಮೊದಲಾಗಿ ಅನೇಕರು ಮಾನ ಸನ್ಮಾನಗಳನ್ನು ಮಾಡಿದ್ದಾರೆ. ಆದರೆ ಅವರಲ್ಲಿದ್ದ ಕಲಾಜ್ಞಾನವನ್ನು ಸಂಪೂರ್ಣವಾಗಿ ಒಂದೆಡೆ ಸಂಗ್ರಹಿಸುವಲ್ಲಿ ನಾವು ಶಕ್ತರಾಗಿಲ್ಲವೇನೋ? ಆ ಕುರಿತು ಒಂದು ಸಣ್ಣ ಪ್ರಯತ್ನದಿಂದ ಸಾಕ್ಷ್ಯಚಿತ್ರವೊಂದನ್ನು ರೂಪಿಸಲಾಗಿದೆ.

ಸಾಕ್ಷ್ಯಚಿತ್ರ ವೀಕ್ಷಣೆಗೆ bit.ly/3eMmXII ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಹೊರಾಂಗಣ ಚಿತ್ರಣವು ಕೆ. ಎಲ್. ಭಟ್ಟರ ಕಲಾಶಿಕ್ಷಣದ ಅವಿಭಾಜ್ಯ ಅಂಗ. ಒಮ್ಮೆ ಹೀಗೆ ವಿದ್ಯಾರ್ಥಿಗಳು ಹೊರಹೋಗಿದ್ದಾಗ ಪ್ರಾಯಶಃ ಕಲಾಶಿಕ್ಷಣ ಕ್ರಮದ ಅರಿವಿರದ ಮೇಲ್ವಿಚಾರಕರು ಬಂದು ಭಟ್ಟರನ್ನು ತರಗತಿಯಲ್ಲಿ ವಿದ್ಯಾರ್ಥಿಗಳಿಲ್ಲ ಎಂಬ ಕಾರಣಕ್ಕೆ ತರಾಟೆಗೆ ತೆಗೆದುಕೊಂಡರು. ಇವರು ವಿವರಿಸಿ ಹೇಳಿದರೂ ಒಪ್ಪಲಾರದೇ ಕ್ರಮಕೈಗೊಳ್ಳುವುದಾಗಿ ಹೇಳಿ ಹೋದರು. ತಕ್ಷಣವೇ ಶಿಕ್ಷಣ ಮಂಡಳಿಗೆ ಕಲಾಶಿಕ್ಷಣದ ರೂಪುರೇಷೆಗಳನ್ನೆಲ್ಲಾ ಮನವರಿಕೆ ಮಾಡಿಕೊಟ್ಟು, ಮೇಲ್ವಿಚಾರಕರ ನಡವಳಿಕೆಯ ಬಗ್ಗೆ ಪತ್ರ ಬರೆದರು. ಮುಂದೊದು ದಿನ ಅದೇ ಮೇಲಧಿಕಾರಿಗಳು ತಮ್ಮ ಅಜ್ಞಾನದ ಬಗೆಗೆ ಇವರಲ್ಲಿ ಕ್ಷಮೆ ಕೇಳಿದರು. ಮುಂದೆ ಟಿ.ಪಿ. ಇಸ್ಸಾರ್ ಕಮಿಟಿಯಲ್ಲಿ ಸದಸ್ಯರಾಗಿ ಸರ್ಕಾರಕ್ಕೆ ಕಲಾಶಾಲೆಗಳ ಕುರಿತು ವರದಿ ತಯಾರಿಸಲು ನೆರವಾದದ್ದನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು.